# ಬೆಳಗಾವಿ ಪ್ರದೇಶದ ಬ್ರಾಹ್ಮಣೇತರ ಚಳುವಳಿ

**ಎಂ.ಎಸ್. ಮಠಪತಿ**

ಪ್ರಾಚಾರ್ಯರು, ಜೆ.ಎಸ್.ಎಸ್ ಶಿಕ್ಷಣ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17296840

## ABSTRACT:

1873ರಲ್ಲಿ ಮಹಾತ್ಮಾ ಪುಲೆಯವರಿಂದ ಆರಂಭಗೊಂಡ ಸತ್ಯಶೋಧಕ ಸಮಾಜ ಚಳುವಳಿಯು ಆಧುನಿಕ ಭಾರತದ ಬ್ರಾಹ್ಮಣೇತರ ಚಳುವಳಿಯಾಗಿದೆ. ಅವರ ಬೆಂಬಲಿಗರು ಹಾಗೂ ಅನುಯಾಯಿಗಳಿಂದ ಅದು ಇಡೀ ಮಹಾರಾಷ್ಟ್ರ, ಉತ್ತರ ಕರ್ನಾಟಕ, ಮೈಸೂರು ಹಾಗೂ ಮದ್ರಾಸ್ ಪ್ರದೇಶಗಳಿಗೂ ಹರಡಿತು. ಈ ಚಳುವಳಿಯು ಧಾರವಾಡ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿತ್ತು. ಈ ಚಳುವಳಿಯ ಇನ್ನೊಂದು ಸ್ವರೂಪ ಎಂದರೆ ಕೇವಲ ಬ್ರಾಹ್ಮಣ ವಿರೋಧಿ ಚಳುವಳಿ ಆಗಿರದೆ ಅದು ಶೇಡಜಿಗಳ ಅಂದರೆ 'ಬನಿಯಾ' ಅಥವಾ 'ಲೇವಾದೇವಿದಾರ'ರ ವಿರೋಧಿ ಚಳುವಳಿಯಾಗಿತ್ತು. ಬೆಳಗಾವಿ ಪ್ರದೇಶದಲ್ಲಿ ಬ್ರಾಹ್ಮಣೇತರ ಚಳುವಳಿಯು ಆರಂಭಗೊಂಡ ಹಿನ್ನಲೆಯಲ್ಲಿ ಹಲವಾರು ರೀತಿಯಲ್ಲಿ ಚಳುವಳಿಗಳು ಆರಂಭಗೊಂಡವು, ಇವುಗಳಿಂದ ಹಲವಾರು ವ್ಯಕ್ತಿಗಳು ಚಳವಳಿಯ ಪ್ರಮುಖ ಉದ್ದೇಶಗಳನ್ನು ತಿಳಿದುಕೊಂಡು, ಚಳುವಳಿಯಲ್ಲಿ ಪಾಲ್ಗೊಂಡರು. ಇದರಿಂದ ಹಲವಾರು ರೀತಿಯ ಸಂಘ ಸಂಸ್ಥೆಗಳು ಸ್ಥಾಪನೆಗೊಂಡವು. ಈ ಕಾರಣಗಳಿಂದ ಬ್ರಾಹ್ಮಣೇತರ ವರ್ಗಗಳಿಗೆ ಅನುಕೂಲವಾಯಿತು.

## KEYWORDS:

ಬನಿಯಾ, ಶೇಡಜಿ, ಮಿಲ್ಲರ್, ಚೆಟ್ಟಿ, ಬೆನನ್ ಸ್ಮಿತ್.

**ಪೀಠಿಕೆ:**

ಬೆಳಗಾವಿ ಪ್ರದೇಶದಲ್ಲಿ ಬ್ರಾಹ್ಮಣೇತರ ಚಳುವಳಿಯು ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಛತ್ರಪತಿ ಶಾಹು ಮಹಾರಾಜರ ಪ್ರೇರಣೆಯಿಂದಾಗಿ ಬ್ರಾಹ್ಮಣೇತರ ಚಳುವಳಿಯು ಆರಂಭಗೊಂಡಿತು. ಈ ಹಿನ್ನಲೆಯಲ್ಲಿ ಮೈಸೂರು ರಾಜ್ಯದಲ್ಲಿ ಜಸ್ಟಿಸ್ ಪಕ್ಷದ ಪ್ರೇರಣೆಯಿಂದಾಗಿ ಪ್ರಾಮಾಣಿಕ ಚಳುವಳಿಯು ಆರಂಭಗೊಂಡಿತು. ಇದರ ಪ್ರಭಾವವು ಬೆಳಗಾವಿ ಪ್ರದೇಶದ ಮೇಲೆಯೂ ಬೀರಿತು. ಈ ಚಳುವಳಿಯಿಂದಾಗಿ ಈ ಭಾಗದ ಪ್ರಮುಖ ಲಿಂಗಾಯತ, ಮರಾಠ, ರೆಡ್ಡಿ, ಜೈನ, ಮುಸ್ಲಿಂ, ಕುರುಬ ಸಮುದಾಯ ಹಾಗೂ ದಲಿತರಲ್ಲಿ ಜಾಗೃತಿ ಮೂಡಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಂಘಟಿತರಾಗಿ ಬ್ರಾಹ್ಮಣರ ಸಮಾನವಾಗಿ ನಿಲ್ಲಲು ಸಾಧ್ಯವಾಯಿತು. ಈ ಚಳುವಳಿಯು ಬ್ರಾಹ್ಮಣೇತರ ವರ್ಗಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವಾತಂತ್ರ್ಯ, ಶೈಕ್ಷಣಿಕ ಅವಕಾಶಗಳನ್ನು ದೊರಕಿಸುವ ಪ್ರಮುಖ ಉದ್ದೇಶವನ್ನು ಒಳಗೊಂಡಿತು.

**ಬೆಳಗಾವಿ ಪ್ರದೇಶದ ಬ್ರಾಹ್ಮಣೇತರ ಚಳುವಳಿ**

19ನೇ ಶತಮಾನದ ಉತ್ತರಾರ್ಧದಲ್ಲಿ ಮುಂಬೈ ಕರ್ನಾಟಕದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಪಡೆಯಲು, ಪುಣೆ, ಮುಂಬಯಿಗಳಿಗೆ ಹೋಗಬೇಕಾಗುತ್ತಿತ್ತು. ಆಗ

ಪುಣೆಯ ಫರ್ಗ್ಯುಸನ್ ಹಾಗೂ ಡೆಕ್ಕನ್ ಕಾಲೇಜುಗಳು ಪ್ರತಿಭಾನ್ವಿತ ಪ್ರಾಧ್ಯಾಪಕರ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳ ಆಕರ್ಷಣೆಯ ಕೇಂದ್ರಗಳಾಗಿದ್ದವು. ಇಲ್ಲಿ ಶಿಕ್ಷಣ ಕಲಿತ ವೀರಶೈವ ವಿದ್ಯಾರ್ಥಿಗಳಿಗೆ ತಮ್ಮ ರಾಜ್ಯದಲ್ಲಿ ವೀರಶೈವ ಮುಖಂಡರು ಶಿಕ್ಷಣದ ಬಗೆಗೆ ತಾಳಿದ ದಿವ್ಯ ನಿರ್ಲಕ್ಷ್ಯ ಅವರಲ್ಲಿ ತುಂಬ ಕಳವಳ ಉಂಟು ಮಾಡಿತು. ಆಗ ಬೆಳಗಾವಿ ಜಿಲ್ಲೆಯ ಹಲವು ಪ್ರಜ್ಞಾವಂತ ಲಿಂಗಾಯತ ನಾಯಕರುಗಳಾದ ರಾಜಾ ಲಖಮನಗೌಡ, ಅರಟಾಳ ರುದ್ರೇಗೌಡ, ಎ.ಬಿ. ಲಠ್ಠೆ, ಪಂಡಿತಪ್ಪ ಚಿಕ್ಕೋಡಿ, ಗಿಲಗಂಜಿ ಗುರುಸಿದ್ಧಪ್ಪ, ಬಿ.ಬಿ. ಮಮದಾಪೂರ, ಸಾಕ್ರರೇ, ಹಂಚಿನಾಳ, ಕಟ್ಟೀಮನಿ, ಶಿ.ಶಿ. ಬಸವನಾಳ ಮುಂತಾದವರು ಶೈಕ್ಷಣಿಕವಾಗಿ ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸುವ ಮುಖಾಂತರ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದರು.

ಕ್ರಿ.ಶ. 1832ರಲ್ಲಿ ಲಂಡನ್ ಸೊಸಾಯಿಟಿಯ ಕ್ರೈಸ್ತ ಮಿಷನರಿಗಳು ಬೆಳಗಾವಿಯಲ್ಲಿ ಬೆನನ್ ಸ್ಮಿತ್ ಹೈಸ್ಕೂಲ್ ಸ್ಥಾಪಿಸಿದರು. ಅಲ್ಲದೇ ದಕ್ಷಿಣ ಸರದಾರರಿಂದ ಹಾಗೂ ಜಹಗೀರದಾರರಿಂದ ವಂತಿಗೆ ಸಂಗ್ರಹಿಸಿ ಸರದಾರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1850ರಲ್ಲಿ ಸರದಾರ ಹೈಸ್ಕೂಲ್ ಪ್ರಾರಂಭಿಸಿದರು. 1868ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪ ಬೆಳಗಾವಿ ಕೇಳ್ಕರ ಮನೆಯಲ್ಲಿ ಲಿಂಗಾಯತ ವಿದ್ಯಾರ್ಥಿಗಳಿಗಾಗಿ ಲಿಂಗಾಯತ ಬೋರ್ಡಿಂಗ್, ಕಾನೂನು ಅಭ್ಯಾಸ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ಗೊಡಗೇರಿ-ಬೆಂಬಳಗಿ ಕಂಪನಿಯನ್ನು ಗೋಕಾಕದಲ್ಲಿ ಸ್ಥಾಪಿಸಿದರು. 1915ರಲ್ಲಿ ಮುಂಬಯಿಯಲ್ಲಿ ಒಂದು ಕಟ್ಟಡ ಬಾಡಿಗೆ ಪಡೆದು ವೀರಶೈವ ಆಶ್ರಮ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಉಚಿತ ಬೋರ್ಡಿಂಗ್ ವ್ಯವಸ್ಥೆ ಮಾಡಿದರು. ನವೆಂಬರ್ 13, 1916ರಂದು 20 ಜನ ವಿದ್ಯಾರ್ಥಿಗಳೊಂದಿಗೆ ಆಂಗ್ಲೋ ವರ್ನಾಕ್ಯುಲರ್ ಸ್ಕೂಲನ್ನು ಬೆಳಗಾವಿ ಕೋಟೆಯಲ್ಲಿ ಒಂದು ಬಾಡಿಗೆ ಕಟ್ಟಡದಲ್ಲಿ ಆರಂಭವಾಯಿತು. ಸತ್ಯ, ಪ್ರೇಮ, ನಿಸ್ವಾರ್ಥ, ತ್ಯಾಗ ಮೊದಲಾದ ಘನ ಉದ್ದೇಶಗಳನ್ನಿಟ್ಟುಕೊಂಡು ‘ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸಾಯಿಟಿ’ ಆರಂಭವಾಯಿತು. 1917ರ ಜುಲೈ 9ರಲ್ಲಿ ಈ ಸೊಸಾಯಿಟಿ ಅಧಿಕೃತ ನೋಂದಣಿ ಆಯಿತು. 1922ರಲ್ಲಿ ನಡೆದ ಕೆ.ಎಲ್.ಇ. ಶೈಕ್ಷಣಿಕ ಸಂಸ್ಥೆಯ ಬಹುಮಾನ ವಿತರಣಾ ಸಮಾರಂಭಕ್ಕೆ ಕೊಲ್ಹಾಪುರದ ಪೂಜ್ಯ ಛತ್ರಪತಿ ಶಾಹು ಮಹಾರಾಜ ಆಮಂತ್ರಿತರಾಗಿ ಬಂದಿದ್ದರು.

ಅದೇ ರೀತಿ ರಾವ್ ಬಹದ್ದೂರ್ ಹಾಗೂ ಶ್ರೀ ಎಸ್.ಎನ್. ಅಂಗಡಿ ಇತರ ಬ್ರಾಹ್ಮಣೇತರ ನಾಯಕರ ಹೆಸರು ಬಹಳ ಯಶಸ್ವಿಯಾಗಿ ಕಾರ್ಯಕ್ರಮ ನೆರವೇರಿಸಿದರು. 1925ರಲ್ಲಿ ಜಿ.ಎ. ಹೈಸ್ಕೂಲ್‌ನಲ್ಲಿ ಲಿಂಗಾಯತ ಸಮ್ಮೇಳನವು ನಡೆಯಿತು. ಈ ಸಮಾವೇಶಕ್ಕೆ ಬೆಳಗಾವಿ, ವಿಜಾಪುರ ಹಾಗೂ ಧಾರವಾಡ ಜಿಲ್ಲೆಯ ಪ್ರಮುಖ ಬ್ರಾಹ್ಮಣೇತರ ಲಿಂಗಾಯತ ನಾಯಕರು ಭಾಗವಹಿಸಿದರು. ಮೌಂಟ್‌ಫರ್ಡ್ ಹಾಗೂ ಲಾರೆನ್ಸ್ ಅವರು ಲಿಂಗಾಯತರಿಗೆ ಉದಾರವಾಗಿ ಧನಸಹಾಯ ಮಾಡಿ ಕೆ.ಎಲ್.ಇ. ಸಂಸ್ಥೆಯನ್ನು ಬೆಳೆಸಲು ಕಾರಣರಾದರು. ಈ ಕಾರಣಕ್ಕಾಗಿಯೇ ಲಿಂಗರಾಜ ಕಾಲೇಜಿನ ಗ್ರಂಥಾಲಯಕ್ಕೆ ಮೌಂಟ್‌ಫರ್ಡ್ ಅವರ ಹೆಸರಿಟ್ಟು ಗೌರವಿಸಲಾಗಿದೆ.

1920ರ ಸಂದರ್ಭದಲ್ಲಿ ಬ್ರಾಹ್ಮಣೇತರ ಚಳುವಳಿ ಒಂದು ರಾಜಕೀಯ ಚಳುವಳಿಯಾಗಿ ಮಾರ್ಪಟ್ಟಿತು. 1921ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬ್ರಾಹ್ಮಣೇತರ ಪಕ್ಷವು ಪ್ರಾರಂಭವಾಯಿತು. 1920ರಲ್ಲಿ ಹುಬ್ಬಳ್ಳಿಯ ಬ್ರಾಹ್ಮಣೇತರ ನಾಯಕರಾದಂತಹ ಶ್ರೀ ಸಿದ್ದಪ್ಪಾ ಕಂಬಳಿ ಹಾಗೂ ಇತರ ಲಿಂಗಾಯತ ನಾಯಕರು ಪ್ರಥಮ ಮುಂಬಯಿ ರಾಜ್ಯದ ರಾಜಕೀಯ ಪರಿಷತ್ತು ನಡೆಸಿದರು. ಇದರ ಅಧ್ಯಕ್ಷತೆಯನ್ನು ಮದ್ರಾಸ್ ಪ್ರಾಂತದ ‘ಜಸ್ಟಿಸ್ ಪಕ್ಷ’ದ ನಾಯಕರಾದಂತಹ ತ್ಯಾಗರಾಜ ಚೆಟ್ಟಿ ವಹಿಸಿದರು. ಈ ಕಾರ್ಯಕ್ರಮದ ಉದ್ಘಾಟಕರಾಗಿ

ಛತ್ರಪತಿ ಶಾಹು ಮಹಾರಾಜರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ 1921ರಲ್ಲಿ ದ್ವಿತೀಯ ಮುಂಬಯಿ ರಾಜ್ಯದ ಬ್ರಾಹ್ಮಣೇತರ ಸಮ್ಮೇಳನವು ದೇವಾಸರ ಮಹಾರಾಜರ ಆಶ್ರಯದಲ್ಲಿ ಬೆಳಗಾವಿಯಲ್ಲಿ ನಡೆಯಿತು. ಈ ಪರಿಷತ್ತಿನ ಪ್ರಭಾವದಿಂದಾಗಿ ಬೆಳಗಾವಿಯಲ್ಲಿ ಅನೇಕ ಬ್ರಾಹ್ಮಣೇತರ ನಾಯಕರು ರಾಜಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು. ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಯಿತು. ನಂತರದಲ್ಲಿ ಬ್ರಾಹ್ಮಣೇತರ ಪಕ್ಷವು 1923ರಲ್ಲಿ ಮುಂಬೈ ವಿಧಾನಸಭೆಯ ಚುನಾವಣೆಗೆ ಸ್ಪರ್ಧಿಸಿ ಬಹುಮತ ಪಡೆಯಿತು.

ಈ ಚುನಾವಣೆಯಲ್ಲಿ ಸರ್. ಸಿದ್ದಪ್ಪ ಕಂಬಳಿಯವರು ಕೂಡ ಆಯ್ಕೆಯಾದರು. 1923ರಲ್ಲಿ ಉಪಸಭಾಪತಿ ಹಾಗೂ 1926ರಲ್ಲಿ ಸಭಾಪತಿ ಆದರು. 1930ರಲ್ಲಿ ಸಚಿವ ಪದವಿಗೂ ಏರಿದರು. 1924ರಲ್ಲಿ ಎ. ರಾಮಸ್ವಾಮಿ ಮೊದಲಿಯಾರ ಅಧ್ಯಕ್ಷತೆಯಲ್ಲಿ ಬ್ರಾಹ್ಮಣೇತರರ ಪರಿಷತ್ತಿನ ನಾಲ್ಕನೆಯ ಸಮ್ಮೇಳನ ಬೆಳಗಾವಿಯಲ್ಲಿ ನಡೆಯಿತು. ಎ.ಬಿ. ಲಠ್ಠೆ ಇದರ ಸ್ವಾಗತಾಧ್ಯಕ್ಷರಾಗಿದ್ದರು. 1930ರಲ್ಲಿ ಸಿದ್ದಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಬ್ರಾಹ್ಮಣೇತರ ಸಮ್ಮೇಳನವು ಬೆಳಗಾವಿಯಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಬ್ರಾಹ್ಮಣೇತರರು ಕಾಂಗ್ರೆಸ್ ಪಕ್ಷದಲ್ಲಿ ಸೇರುವುದಾಗಿ ತೀರ್ಮಾನಿಸಿದರು. ಅಧ್ಯಕ್ಷರು ತಮ್ಮ ಭಾಷಣದ ಕೊನೆಯಲ್ಲಿ 'ಸ್ವತಂತ್ರ ಭಾರತವು ಅಲ್ಪಸಂಖ್ಯಾತರ ಹಕ್ಕು ಹಾಗೂ ಹಿತಾಸಕ್ತಿಗಳನ್ನು ಬ್ರಿಟಿಷ್ ಸರ್ಕಾರಕ್ಕಿಂತ ಸಮರ್ಥವಾಗಿ, ಚೆನ್ನಾಗಿ ಕಾಪಾಡುತ್ತದೆ' ಎಂದರು. ಈ ಭಾಗದ ಬ್ರಾಹ್ಮಣೇತರ ಚಳುವಳಿಯಲ್ಲಿನ ಬಹುಸಂಖ್ಯಾತ ಲಿಂಗಾಯತರು ಹಾಗೂ ಇತರ ಬ್ರಾಹ್ಮಣೇತರರು ತಮ್ಮ ಗಮನವನ್ನು ಕರ್ನಾಟಕ ಏಕೀಕರಣಕ್ಕಾಗಿ ಕೇಂದ್ರೀಕರಿಸಿದರು.

**ಉಪಸಂಹಾರ**

ಬೆಳಗಾವಿ ಪ್ರದೇಶದಲ್ಲಿ ನಡೆದ ಬ್ರಾಹ್ಮಣೇತರ ಚಳುವಳಿಯು ಉತ್ತರ ಕರ್ನಾಟಕದಲ್ಲಿ ತನ್ನದೇ ಆದ ವಿಭಿನ್ನ ಆಯಾಮಗಳೊಂದಿಗೆ ಬ್ರಾಹ್ಮಣೇತರ ವರ್ಗಗಳಿಗೆ ಒಂದು ಮೈಲುಗಲ್ಲಾಯಿತು. ಶತಮಾನಗಳಿಂದ ಮೇಲ್ವರ್ಗಗಳ ದಬ್ಬಾಳಿಕೆಯಿಂದ ಶೋಷಣೆಯ ಸ್ಥಿತಿ ತಲುಪಿದ ಹಲವಾರು ಬ್ರಾಹ್ಮಣೇತರ ವರ್ಗಗಳಿಗೆ ಸ್ಫೂರ್ತಿಯಾಯಿತು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಶೋಷಿತ ಸಮುದಾಯಗಳಿಗೆ ಸಮಾನ ಅವಕಾಶ ಒದಗಿಸುವುದು ಮತ್ತು ಸರಿಯಾದ ಪ್ರಮಾಣದ ಪ್ರಾತಿನಿಧ್ಯ ನೀಡುವುದು ಅಲ್ಲದೆ ಬ್ರಾಹ್ಮಣೇತರ ವರ್ಗಗಳಿಗೂ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು ಪ್ರಮುಖ ಉದ್ದೇಶವಾಗಿತ್ತು.

**ಪರಾಮರ್ಶನ ಗ್ರಂಥಗಳು:**


1. ಮಠಪತಿ ಎಂ.ಎಸ್ (2025)., ವಸಾಹತುಕಾಲೀನ ಬೆಳಗಾವಿ ಜಿಲ್ಲೆ : ಚಾರಿತ್ರಿಕ ಹಾಗೂ ಸಮಾಜೋ–ಆರ್ಥಿಕ ಅಧ್ಯಯನ (1799–1947) ಪಿ.ಎಚ್‌ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 83–87
2. ಜೇಮ್ಸ್ ಎಂ. ಕ್ಯಾಂಪಬೆಲ್ಲ್., ಗ್ಯಾಜೆಟಿಯರ್ ಆಫ್ ಇಂಡಿಯಾ. ಬೆಳಗಾವಿ. ಪು. 375–82.
3. ಜೇಮ್ಸ್ ಎಂ. ಕ್ಯಾಂಪಬೆಲ್ಲ್., ಗ್ಯಾಜೆಟಿಯರ್ ಆಫ್ ಇಂಡಿಯಾ. ಬೆಳಗಾವಿ. ಪುಟ. 401–406
4. ಶೀಲಾಧರ ಮುಗಳಿ ಮತ್ತು ಖಾತೇದಾರ ಎ.ಡಿ., (2010), ಬೆಳಗಾವಿ ಜಿಲ್ಲೆಯ ಬ್ರಾಹ್ಮಣೇತರ ಚಳುವಳಿ, ಪೂರ್ವೋಕ್ತ, ಪು. 580
5. ಎಚ್. ಎಸ್. ಗೋಪಾಲರಾವ್., (2012), ಕರ್ನಾಟಕ ಏಕೀಕರಣ ಇತಿಹಾಸ. ಪು. 56.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.